ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ
ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – 560 001


ಸಂಖ್ಯೆ: ಸಶಿಅ/ಆ.ಚ/ಓ.ಬ.ಅ/1/2016–17 ದಿನಾಂಕ: 2.11.2016

# ಸುತ್ತೋಲೆ

**ವಿಷಯ:** **"ಓದು, ಬರಹ, ಅಭಿವ್ಯಕ್ತಿ ಹಾಗೂ ಸರಳ ಗಣಿತ ಲೆಕ್ಕಾಚಾರ ಸಾಮರ್ಥ್ಯಗಳ ಅಭಿವೃದ್ಧಿ ಮಾಸಾಚರಣೆ** ಕಾರ್ಯಕ್ರಮದಡಿ ಹಮ್ಮಿಕೊಳ್ಳಬೇಕಾದ ಚಟುವಟಿಕೆಗಳ ಮಾರ್ಗಸೂಚಿ.

ಉಲ್ಲೇಖ: 1. **"ಪಢೇ ಭಾರತ್ ಬಢೇ ಭಾರತ್"** ಕಾರ್ಯಕ್ರಮದಡಿ ಈ ಕಚೇರಿಯಿಂದ ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಸಶಿಅ/ಆ.ಚ/ಓ.ಬ.ಅ/1/2015–16 ದಿ:26.10.2015
2. ಎಂ.ಹೆಚ್.ಆರ್.ಡಿ ಯ ಪಿ.ಎ.ಬಿ ಅನುಮೋದನೆ ದಿ: 22.04.2016.

************

ಶಿಕ್ಷಣದಲ್ಲಿ ಗುಣಮಟ್ಟ ಉತ್ತಮ ಪಡಿಸಲು ಓದು ಬರಹ ಕೌಶಲ್ಯಗಳನ್ನು ಮಕ್ಕಳು ಸಮರ್ಪಕವಾಗಿ ಮೈಗೂಡಿಸಿಕೊಳ್ಳುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಶಾಲಾ ಮಕ್ಕಳಲ್ಲಿ "ಸ್ಪಷ್ಟ ಓದು ಶುದ್ಧ ಬರಹ ಹಾಗೂ ಗಣಿತದ ಲೆಕ್ಕಾಚಾರ"ಗಳ ಅಭಿವೃದ್ಧಿಗಾಗಿ "ಪಢೇ ಭಾರತ್ ಬಢೇ ಭಾರತ್" ಕಾರ್ಯಕ್ರಮದಡಿ ಅನೇಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸೂಚಿಸಿದೆ. ಸದರಿ ಕಾರ್ಯಕ್ರಮದಿಂದ ಈ ಕೆಳಗಿನ ಉದ್ದೇಶಗಳು ಸಫಲವಾಗಿರುವ ಬಗ್ಗೆ ಪರಿಶೀಲಿಸುವುದು.

- ಪರಿಣಾಮಕಾರಿ ಬೋಧನಾ– ಕಲಿಕಾ ಪ್ರಕ್ರಿಯೆಯು (Effective Teaching Learning Process) ಗುಣಾತ್ಮಕ ಕಲಿಕೆಗೆ ಹಾದಿ ಎಂಬುದನ್ನು ಸಾಬೀತುಪಡಿಸುವುದು.
- ಸ್ಪಷ್ಟ ಓದು ಶುದ್ಧ ಬರಹ, ಅಭಿವ್ಯಕ್ತಿ ಹಾಗೂ ಸರಳ ಲೆಕ್ಕಾಚಾರ ಸಾಮರ್ಥ್ಯಗಳ ವಿಕಾಸಕ್ಕೆ ಉತ್ತಮ ವೇದಿಕೆ ರೂಪಿಸುವುದು.
- ಓದು ಬರಹ ಹಾಗೂ ಅಭಿವ್ಯಕ್ತಿ ಸಾಮರ್ಥ್ಯಗಳನ್ನು ಶಾಲೆಯ ಎಲ್ಲಾ ಮಕ್ಕಳು ಪಡೆಯುವಂತೆ ಪ್ರೇರೇಪಿಸುವುದು.
- ಕಲಿಕಾ ಸಾಮರ್ಥ್ಯದಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ, ಪರಿಹಾರ ಬೋಧನೆ ಕೈಗೊಳ್ಳುವುದು.
- ಶಿಕ್ಷಕರು ಶಾಲೆಗಳಲ್ಲಿ ವಿವಿಧ ಭಾಷಾ ಚಟುವಟಿಕೆಗಳು, ಸ್ಪರ್ಧೆಗಳು, ಗ್ರಂಥಾಲಯದ ಪುಸ್ತಕಗಳ ಬಳಕೆ, ಪ್ರಯೋಗ, ಹೊಸ ಚಟುವಟಿಕೆಗಳನ್ನು ಬಳಸಿಕೊಂಡು ಮಕ್ಕಳ ಕಲಿಕಾ ಸಾಮರ್ಥ್ಯಗಳ ಬೆಳವಣಿಗೆಗೆ ಅವಕಾಶ ಮಾಡಿಕೊಡುವುದು.
- ಉತ್ಕೃಷ್ಟ/ವಿಶೇಷ ಕಲಿಕೆ ಸಾಧಿಸಿರುವ ಮಕ್ಕಳು ಉಳಿದ ಮಕ್ಕಳಿಗೆ ಪ್ರೇರಣೆ (Motivate) ನೀಡುವಂತಾಗಲು ಹಾಗೂ ಸಾಧನೆ ಮನಸ್ಥಿತಿಯ ಸಮಾಜ ಸೃಷ್ಟಿಸುವುದು.
- ಪೋಷಕರು/ಸಮುದಾಯಕ್ಕೆ ಸರ್ಕಾರಿ ಶಾಲೆಗಳಲ್ಲಿನ ಗುಣಾತ್ಮಕ ಶಿಕ್ಷಣ ನೀಡುವ ವ್ಯವಸ್ಥೆಯ ಬಗ್ಗೆ ತಿಳಿಸಲು ಮತ್ತು ಆ ಮೂಲಕ ಸರ್ಕಾರಿ ಶಾಲೆಗಳೆಡೆಗೆ ಆಕರ್ಷಿಸುವುದು.
- ಇಲಾಖೆಯ ವಿನೂತನ ಕಾರ್ಯತಂತ್ರಗಳು ಮಕ್ಕಳ ಕಲಿಕೆಗೆ ಪೂರಕವಾಗಿರುವುದನ್ನು ನಿರೂಪಿಸಲು ಮತ್ತು ಶಾಲೆಗಳಲ್ಲಿನ ಕಲಿಕಾ ಸಾಧನೆಗೆ ಪಾರದರ್ಶಕತೆ ತರಲು ಪ್ರಯತ್ನಿಸುವುದು.

ಕಾರ್ಯಕ್ರಮದ ಅನುಷ್ಠಾನದ ವಿವರ:-

ಕಳೆದ ಸಾಲಿನಂತೆ 2016-17 ನೇ ಸಾಲಿನಲ್ಲಿಯೂ ಆವಿಷ್ಕೃತ ಚಟುವಟಿಕೆಯಡಿ ಕೈಗೊಳ್ಳಲಾಗುತ್ತಿರುವ **ಅರ್ಥಗ್ರಹಿಕೆ "ಓದು, ಬರಹ ಹಾಗೂ ಸರಳ ಗಣಿತ ಲೆಕ್ಕಾಚಾರ ಸಾಮರ್ಥ್ಯಗಳ ಅಭಿವೃದ್ಧಿ " ಮಾಸವೆಂದು** ನವೆಂಬರ್ ಹಾಗೂ ಡಿಸೆಂಬರ್ ತಿಂಗಳಿನಲ್ಲಿ ಆಚರಿಸಲು ಯೋಜಿಸಲಾಗಿದ್ದು, ಅದರಂತೆ ಸದರಿ ತಿಂಗಳುಗಳಲ್ಲಿ ಪ್ರತಿ ಸರ್ಕಾರಿ ಶಾಲೆಗಳಲ್ಲಿ ಎಲ್ಲಾ ಮಕ್ಕಳಿಗೆ **ಸ್ಪಷ್ಟ ಓದು, ಶುದ್ಧ ಬರಹ, ನಿರರ್ಗಳವಾಗಿ ಮಾತನಾಡುವ ಹಾಗೂ ಸರಳ ಗಣಿತ ಲೆಕ್ಕಾಚಾರದ ಸಾಮರ್ಥ್ಯಗಳ ಅಭಿವೃದ್ಧಿಗಾಗಿ** ಈ ಕೆಳಕಂಡ ಚಟುವಟಿಕೆಗಳನ್ನು ಕಡ್ಡಾಯವಾಗಿ ಹಮ್ಮಿಕೊಂಡು ಎಲ್ಲಾ ವಿದ್ಯಾರ್ಥಿಗಳು ತರಗತಿವಾರು ನಿಗದಿತ ಸಾಮರ್ಥ್ಯಗಳನ್ನು ಪಡೆಯುವಂತೆ ಅಗತ್ಯ ಕ್ರಮ ವಹಿಸುವುದು.

**ಶಾಲಾ ಮಕ್ಕಳಲ್ಲಿ ಓದುವ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಲು ಕೈಗೊಳ್ಳಬಹುದಾದ ಚಟುವಟಿಕೆಗಳು:-**

- ಪ್ರತಿ ದಿನ ಪ್ರಾರ್ಥನೆಯಲ್ಲಿ ದಿನಪತ್ರಿಕೆಯನ್ನು ಓದಿಸುವುದು.
- ಪ್ರತಿ ದಿನ ಶಾಲಾ ಕಪ್ಪು ಹಲಗೆಯ ಮೇಲೆ ಸುಭಾಷಿತ, ಗಾದೆಮಾತುಗಳನ್ನು ಬರೆದು ಓದಿಸುವುದು ಹಾಗೂ ಅರ್ಥ ತಿಳಿಸುವುದು.
- ಪ್ರತಿ ದಿನ ಒಂದೊಂದು ಭಾಷೆಯ ಪದ್ಯವನ್ನು ಅಭ್ಯಾಸ ಮಾಡಿ ಬರಲು ತಿಳಿಸಿ, ಭಾಷಾ ಕಲಿಕೆಯ ಅಥವಾ ಇತರೆ ಅವಧಿಯಲ್ಲಿ ಹೇಳಿಸುವುದು.
- ನಲಿ-ಕಲಿ ತರಗತಿಗಳಲ್ಲಿ ವಾಚಕಗಳನ್ನು ಬಳಸಿ ಓದಿಸುವುದು.
- ಗ್ರಂಥಾಲಯದ ಪುಸ್ತಕಗಳನ್ನು ಕ್ರಮಬದ್ಧವಾಗಿ ಜೋಡಿಸಿ, ಗ್ರಂಥಾಲಯದ ಎಲ್ಲಾ ಪುಸ್ತಕಗಳನ್ನು ಮಕ್ಕಳು ಓದುವಂತೆ ಪ್ರೇರೇಪಿಸುವುದು ಹಾಗೂ ಪುಸ್ತಕಗಳನ್ನು ಮನೆಗೆ ಕೊಡುವುದು/ ಶಾಲೆಯಲ್ಲಿ ಓದಿಸುವುದು.
- ಓದುಗಾರಿಕೆಗೆ ನಿಗದಿಪಡಿಸಿದ ಸಮಯದಲ್ಲಿ ಕಡ್ಡಾಯವಾಗಿ ಓದಿಸುವುದು.
- ಶಾಲಾ ಅವಧಿಯ ನಂತರ ವಿದ್ಯಾರ್ಥಿಗಳಿಗೆ ಬಾಯ್ದೆರೆ ಓದು ಅಭ್ಯಾಸ ಮಾಡಲು ಹೆಚ್ಚು ಪ್ರೋತ್ಸಾಹಿಸುವುದು. ಹಾಗೂ ಪಾಲಕರಿಗೆ ಗಮನಿಸುವಂತೆ ಸೂಚಿಸುವುದು.
- ಶಿಕ್ಷಕರು ಪುಸ್ತಕವನ್ನು ಗಟ್ಟಿಯಾಗಿ ಮಕ್ಕಳಿಗಾಗಿ ಓದುವುದು.
- ಚಿತ್ರಕಥಾ ಪುಸ್ತಕ (Comic) ಗಳನ್ನು ಮಕ್ಕಳಿಂದ ಓದಿಸುವುದು ಹಾಗೂ ಅವರ ತಪ್ಪುಗಳನ್ನು ತಿದ್ದುವುದು.
- **'ನಾನೋದಿದ ಪುಸ್ತಕ'** ಮಕ್ಕಳು ಡೈರಿಯಲ್ಲಿ ತಾವು ಓದಿದ ಪುಸ್ತಕದ ಹೆಸರು ಬರೆದು ದಾಖಲಿಸುವುದು. ಅತಿ ಹೆಚ್ಚು ಪುಸ್ತಕಗಳನ್ನು ಓದಿದವರ ಹೆಸರನ್ನು ನಾಮಫಲಕದಲ್ಲಿ ಪ್ರಕಟಿಸುವುದು.

**ಬರೆಯುವ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಲು ಕೈಗೊಳ್ಳಬಹುದಾದ ಚಟುವಟಿಕೆಗಳು:-**

- ಪ್ರತಿ ನಿತ್ಯ ಕನ್ನಡ, ಇಂಗ್ಲೀಷ್ ಹಾಗೂ ಹಿಂದಿ ಭಾಷೆಯ ಬರಹವನ್ನು ಒಂದೊಂದು ಪುಟದಂತೆ ಕಾಪಿಪುಸ್ತಕ ಬರೆಸುವುದು ಹಾಗೂ ಪ್ರತಿ ದಿನ ಉಕ್ತಲೇಖನ ನೀಡುವುದು.
- ಬರೆಯುವಾಗ ಅಕ್ಷರಗಳ ಮತ್ತು ಪದಗಳ ನಡುವಿನ ನಿರ್ದಿಷ್ಟ ಅಂತರವನ್ನು ಅಭ್ಯಾಸ ಮಾಡಿಸುವುದು.
- ಲೇಖನ ಚಿಹ್ನೆಗಳನ್ನು ಪರಿಚಯಿಸಿ, ಅವುಗಳ ಪಾತ್ರ, ಅರ್ಥ ಮತ್ತು ಬಳಕೆಯ ಸಂದರ್ಭಗಳನ್ನು ತಿಳಿಸುವುದು.
- ಪದ್ಯ/ ವಾಕ್ಯ/ ಶಿಶುಗೀತೆಗಳನ್ನೊಳಗೊಂಡ ಭಿತ್ತಿಪತ್ರ/ ಶಾಲಾ ನಿಯಮಗಳ ಪೋಸ್ಟರ್ ಬರೆಸುವುದು.
- ಅರ್ಥಪೂರ್ಣ ಪದ/ವಾಕ್ಯ ರಚನೆ ಮಾಡಿಸುವುದು.
- ಚಿತ್ರಗಳನ್ನು ನೋಡಿ ಕಥೆಯನ್ನು ರಚಿಸುವುದು ಹಾಗೂ ಅಪೂರ್ಣ ಕಥೆಯನ್ನು ನೀಡಿ ಮಕ್ಕಳಿಂದ ಪೂರ್ಣಗೊಳಿಸುವಂತೆ ಮಾರ್ಗದರ್ಶನ ಮಾಡುವುದು.
- ಪದಬಂಧ ರಚನೆ ಮಾಡಿಸುವುದು. ಪರಿಚಿತ ವಸ್ತುಗಳು, ಪ್ರಸಿದ್ಧ ವ್ಯಕ್ತಿಗಳು, ಪ್ರಸಿದ್ಧ ಸ್ಥಳಗಳು, ಪರಿಸರ ಸಂರಕ್ಷಣೆ ಇವುಗಳ ಬಗ್ಗೆ ಪ್ರಬಂಧ ರಚನೆಯನ್ನು ಅಭ್ಯಾಸ ಮಾಡಿಸುವುದು.

- ಮಕ್ಕಳಿಂದ ಗೆಳೆಯರಿಗೆ, ಶಿಕ್ಷಕರಿಗೆ ಪತ್ರ ಬರೆಸುವುದು.
- ಮಕ್ಕಳು ವಾರ್ತಾಪತ್ರಿಕೆಗಳಲ್ಲಿನ ಚಿತ್ರಗಳನ್ನು ಸಂಗ್ರಹಿಸಿ, ಅವುಗಳನ್ನು ಪುಸ್ತಕದಲ್ಲಿ ಅಂಟಿಸಿ 3 ರಿಂದ 4 ವಾಕ್ಯಗಳನ್ನು ಬರೆಸುವುದು.
- ವಿದ್ಯಾರ್ಥಿಗಳಲ್ಲಿ ತಂಡಗಳನ್ನು ರಚಿಸಿ, ಅವರ ಬರಹವನ್ನು ಮೌಲ್ಯಮಾಪನ ಮಾಡಿಸುವುದು.
- ಶಾಲಾ ಹಸ್ತಪತ್ರಿಕೆಯನ್ನು ಮಕ್ಕಳಿಂದ ತಯಾರಿಸುವುದು.

**ಅಭಿವ್ಯಕ್ತಿ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಲು ಕೈಗೊಳ್ಳಬಹುದಾದ ಚಟುವಟಿಕೆಗಳು:-**

- ಚಿತ್ರ ನೋಡಿ ಕಥೆ ಹೇಳಿಸುವುದು. ಮಕ್ಕಳಿಗೆ ತಮಗಿಷ್ಟವಾದ ಕಾರ್ಡ್‌ನ್ನು ಆಯ್ದುಕೊಂಡು ಓದಲು, ಕಥೆ ಹೇಳಲು ತಿಳಿಸುವುದು.
- ಶಿಕ್ಷಕರು ಪಠ್ಯದಲ್ಲಿನ ಶಿಶುಗೀತೆಗಳನ್ನು ಹಾಡಿಸುವುದು.
- ವಾಚಕಗಳನ್ನು ಓದಿಸಿದ ಬಳಿಕ ಸರಳ ಪ್ರಶ್ನೆಗಳನ್ನು ಕೇಳುವ ಮೂಲಕ ಮಕ್ಕಳ ಅರ್ಥಗ್ರಹಣ ಸಾಮರ್ಥ್ಯ ಹೆಚ್ಚಿಸುವುದು.
- ವಾರದ ಸಾಂಸ್ಕೃತಿಕ ಕಾರ್ಯಕ್ರಮದ ದಿನ ಮಕ್ಕಳು ತಾವು ಓದಿದ ಕಥೆ/ಹಾಡು/ನಾಟಕವನ್ನು ಅಭಿನಯಿಸುವುದು ಹಾಗೂ ವಿಶೇಷ ದಿನಗಳ ಆಚರಣೆಯಲ್ಲಿ ಮಕ್ಕಳಿಗೆ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಆಸ್ವಾದಿಸುವುದು.
- ಶಾಲಾ ಹಂತದ ಕವಿಗೋಷ್ಠಿ ನಡೆಸುವುದು.
- ಮಕ್ಕಳಿಗೆ ಪ್ರಶ್ನೋತ್ತರ ಕಾರ್ಯಕ್ರಮ, ಆಶುಭಾಷಣ, ಭಾಷಣ, ಚರ್ಚೆಗಳನ್ನು ಆಯೋಜಿಸುವುದು.

**ಸರಳ ಗಣಿತ ಲೆಕ್ಕಾಚಾರ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಲು ಕೈಗೊಳ್ಳಬಹುದಾದ ಚಟುವಟಿಕೆಗಳು:-**

- ಮಕ್ಕಳಿಗೆ ಸಂಖ್ಯೆಗಳನ್ನು ಹಾಗೂ ಸ್ಥಾನ ಬೆಲೆಯನ್ನು ಅರ್ಥೈಸುವುದು.
- ಪ್ರತಿ ದಿನ ಲೆಕ್ಕಗಳನ್ನು ಮನೆಗೆಲಸ ರೂಪದಲ್ಲಿ ನೀಡಿ ಅಭ್ಯಾಸ ಮಾಡಿಸುವುದು ಹಾಗೂ ಅವುಗಳನ್ನು ಪರಿಶೀಲಿಸುವುದು ಹಾಗೂ ಮಕ್ಕಳಿಗೆ ಅವರ ತಪ್ಪುಗಳ ಮನವರಿಕೆ ಮಾಡುವುದು.
- ಲೆಕ್ಕಗಳನ್ನು ತಿಳಿಸುವಾಗ ಸುಲಭವಾಗಿ ಲಭ್ಯವಾಗುವ ಮಾದರಿಗಳನ್ನು ಬಳಸಿ ಬೋಧಿಸುವುದು ಹಾಗೂ ವಿವಿಧ ವಿಧಾನಗಳನ್ನು ಬಳಸಿ ಮಕ್ಕಳಿಗೆ ಅರ್ಥ ಮಾಡಿಸುವುದು.
- ಮನೆಯಲ್ಲಿ ದಿನನಿತ್ಯ ವ್ಯವಹರಿಸುವ ಹಾಗೂ ಬಳಸುವ ವಸ್ತುಗಳನ್ನು ಉದಾಹರಣೆಯಾಗಿ ನೀಡುವುದು.
- ಗಣಿತದ ಸೂತ್ರಗಳನ್ನು ಅಭ್ಯಾಸ ಮಾಡಿಸುವುದು.
- ವಿದ್ಯಾರ್ಥಿಗಳಿಂದ ಕಪ್ಪು ಹಲಗೆಯ ಮೇಲೆ ಲೆಕ್ಕಗಳನ್ನು ಮಾಡಿಸಿ ಅವರ ತಪ್ಪುಗಳನ್ನು ತಿದ್ದುವುದು.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ
ಬೆಂಗಳೂರು

ಇವರಿಗೆ

1. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಇವರಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.

3. ಎಲ್ಲಾ ಜಿಲ್ಲೆಗಳ ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು (ಡಿವೈಪಿಸಿ) ಸರ್ವ ಶಿಕ್ಷಣ ಅಭಿಯಾನ ಇವರಿಗೆ ಅಗತ್ಯ ಕ್ರಮ ಮತ್ತು ಅನುಸರಣೆಗಾಗಿ.

**ಇವರಿಗೆ ಮಾಹಿತಿಗಾಗಿ**

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ, ಧಾರವಾಡ
3. ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ (ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ಡಿ.ಎಸ್.ಇ.ಆರ್.ಟಿ, ಅಲ್ಪಸಂಖ್ಯಾತ ಭಾಷೆಗಳು, ಧಾರವಾಡ, ಗುಲ್ಬರ್ಗಾ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು)
4. ಪ್ರಾಂಶುಪಾಲರು ಸಿ.ಟಿ.ಇ, ಮೈಸೂರು., ಚಿತ್ರದುರ್ಗ, ಜಮಖಂಡಿ ಗುಲ್ಬರ್ಗ, ಮಂಗಳೂರು ಮತ್ತು ಬೆಳಗಾಂ.
5. ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ, ಮೈಸೂರು; (ವಿಭಾಗೀಯ ಕಛೇರಿಗಳು)
6. ಈ ಕಛೇರಿಯ ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಭೇಟಿ ಸಮಯದಲ್ಲಿ ಪರಿಶೀಲಿಸುವುದು.